*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 48 – 60*

# ಆಯ್ದ ಪುರಾಣ ಕಾವ್ಯಗಳಲ್ಲಿ ಪುರುಷ ಭಾವಗಳ ಒಳನೋಟ

**ಸೈಯದ್ ಮುಯಿನ್**
*ಸಹಾಯಕ ಪ್ರಾಧ್ಯಾಪಕ,*
*ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಬೆಂಗಳೂರು*
Email: syedmuen@kristujayanti.com

## ಪುರುಷ ಭಾವ: ಮರು ಪುರಾಣ ಕಾವ್ಯಗಳು

ಈ ಸಂಶೋಧನ ನಿಬಂಧಕ್ಕೆ ಜಗತ್ತಿನ ಪ್ರಸಿದ್ಧ ಪುರಾಣ ಮತ್ತು ಧಾರ್ಮಿಕ ಗ್ರಂಥಗಳಲ್ಲಿ ಬರುವ ಪುರುಷ ಶೋಕದ ಸಂದರ್ಭಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಲಿಂಗ ಭೇದವಿರುವುದಕ್ಕೆ ಮುಖ್ಯ ಕಾರಣ ಸಾಮಾಜಿಕ–ಸಾಂಸ್ಕೃತಿಕ ವ್ಯವಸ್ಥೆಯೊಂದಿಗೆ ದೇಹ ರಚನೆ, ನರಮಂಡಲ ವಿನ್ಯಾಸವೂ ಆಗಿದೆ ಎಂಬುದನ್ನು ಕುರಿತು ಇಲ್ಲಿ ಚರ್ಚೆ ಮಾಡಲಾಗಿದೆ. ಪುರಾಣಗಳಲ್ಲಿ ಬರುವ ಪುರುಷ ಶೋಕ ಪ್ರಧಾನ ಪ್ರಸಂಗಗಳನ್ನು ತೌಲನಿಕ ವಿಧಾನ ಮತ್ತು ವಿವರಣಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.

ಜನರು ತಮ್ಮ ಭಾವನೆಗಳನ್ನು ಎಷ್ಟರ ಮಟ್ಟಿಗೆ ವ್ಯಕ್ತಪಡಿಸುತ್ತಾರೆ ಎಂಬುದಕ್ಕೆ ಸ್ಪಷ್ಟ ವ್ಯತ್ಯಾಸಗಳಿವೆ. ಭಾವನಾತ್ಮಕ ಅಭಿವ್ಯಕ್ತಿಯ ವ್ಯತ್ಯಾಸಗಳು ದೀರ್ಘಕಾಲದಿಂದಲೂ ಆಸಕ್ತ ಸಂಶೋಧಕರನ್ನು ಗಮನಹರಿಸಿದೆ ಮತ್ತು ಈ ವ್ಯತ್ಯಾಸಗಳು ಮನೋವಿಜ್ಞಾನದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿವೆ. ಭಾವನೆಯು ಜೈವಿಕ ಮತ್ತು ನಡವಳಿಕೆಯ ಬದಲಾವಣೆಗಳೊಂದಿಗೆ ಸಂಕೀರ್ಣವಾದ, ವ್ಯಕ್ತಿನಿಷ್ಠ ಅನುಭವವಾಗಿದೆ. ನರಮಂಡಲವು ಭಾವನೆ, ಆಲೋಚನೆಗಳನ್ನು ಸಕ್ರಿಯಗೊಳಿಸುವಿಕೆ, ದೈಹಿಕ ಬದಲಾವಣೆಗಳು ಮತ್ತು ನಡವಳಿಕೆಯ ಬದಲಾವಣೆಗಳನ್ನು ಒಳಗೊಂಡಿರುತ್ತದೆ. ಈ ಅಧ್ಯಯನದಲ್ಲಿ ಭಾವನೆಗಳನ್ನು ಸಂಕುಚಿತಾರ್ಥದಲ್ಲಿ ಪ್ರೀತಿ, ಪ್ರೇಮ, ಶೋಕವನ್ನ ಅಭಿವ್ಯಕ್ತಿಸುವ ಕ್ರಮವನ್ನ ಮಾತ್ರ ಚರ್ಚೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಚಹರೆಯ ಅಭಿವ್ಯಕ್ತಿಗಳು ಜನರ ಭಾವನೆಗಳನ್ನು ಹೇಗೆ ಮತ್ತು ಏಕೆ ಅಭಿವ್ಯಕ್ತಿಸುತ್ತಾರೆ ಎಂಬುದರ ಕುರಿತು ವಿಭಿನ್ನ ಸಿದ್ಧಾಂತಗಳು ಅಸ್ತಿತ್ವದಲ್ಲಿವೆ. ಭಾವನೆಗಳು ಯಾರನ್ನಾದರು ಅಥವಾ ಯಾವುದನ್ನಾದರೂ ತೀವ್ರವಾಗಿ ನಿರ್ದೇಶಿಸುವ ಶಕ್ತಿಯನ್ನು ಹೊಂದಿವೆ. ಮನಃಶಾಸ್ತ್ರಜ್ಞರ ಪ್ರಕಾರ ಮಹಿಳೆ ಮತ್ತು ಪುರುಷರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಮತ್ತು ಸಂಬಂಧಿತ ಆಲೋಚನೆಗಳ ವಿವರಣೆಯಲ್ಲಿ ಪರಸ್ಪರ ಭಿನ್ನವಾಗಿರುತ್ತಾರೆ. ಇದನ್ನು ಲಿಂಗರೇಖೆಯಲ್ಲಿ ವ್ಯಾಖ್ಯಾನಿಸಲು ಹೊರಟಾಗ ಇದರ ವಿವರಣೆಯು ಇನ್ನಷ್ಟು ಕಷ್ಟಕರವಾಗುತ್ತದೆ.

ಆಧುನಿಕ ಅಧ್ಯಯನಗಳ ಪ್ರಕಾರ ಪುರುಷನು ಸ್ತ್ರೀಯ ಪ್ರತಿ ಬೇಗವಾಗಿ ಆಕರ್ಷಿತನಾಗಿ ತನ್ನ ಪ್ರೇಮ ನಿವೇದನೆಯನ್ನು ಮಾಡುತ್ತಾನೆ. ಆದರೆ ಸ್ತ್ರೀಯೊಬ್ಬಳು ಪುರುಷನ ಮೇಲೆ ವಿಶ್ವಾಸ, ಪ್ರೇಮ ನಿವೇದನೆಯು

ಅಭಿವ್ಯಕ್ತಿಸುವುದು ತೀರಾ ವಿರಳ. ಪುರುಷನು ತನ್ನ ಪ್ರೇಮ ನಿವೇದನೆಯನ್ನು ಎಷ್ಟು ಬೇಗ ಅಭಿವ್ಯಕ್ತಿಸುತ್ತಾನೋ ಹಾಗೆಯೇ ಆ ಪ್ರೇಮವನ್ನು ನಿಭಾಯಿಸಲು ಬೇಕಾದ ಸಾವಧಾನ ಚಿತ್ತವನ್ನು ಹೊಂದಿದ್ದಾನೆ. ತಾನು ಪ್ರೀತಿಸಿದ ಲಿಂಗವು ಕೇವಲ ಒಂದು ದೈಹಿಕ ರಚನೆಯಾಗಿದೆ. ಪ್ರತಿಯೊಬ್ಬರು ಲಿಂಗ ಆಧಾರದ ಮೇಲೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವುದಿಲ್ಲ. ಪ್ರೀತಿ–ಪ್ರೇಮದ ವಿಷಯಕ್ಕೆ ಬಂದರೆ ಯಾವುದೇ ನಿಯಮಗಳಿಲ್ಲ, ಆದರೆ ಮನೋವಿಜ್ಞಾನವು ಕೆಲವೊಂದು ಆಸಕ್ತಿದಾಯಕ ಪ್ರವೃತ್ತಿಗಳನ್ನು ಕಂಡು ಹಿಡಿದಿರುವುದನ್ನು ಕಾಣಬಹುದಾಗಿದೆ.

ವಿಕಾಸವಾದದ ಹಿನ್ನೆಲೆಯಲ್ಲಿ ಈ ವಿಷಯವನ್ನು ಚರ್ಚಿಸಿದರೆ ಹೆಣ್ಣು ತನ್ನನ್ನು ರಕ್ಷಿಸಲು, ಆಸರೆಯ ರೂಪದಲ್ಲಿ ಗಂಡನ್ನು ಬಯಸುವುದರಿಂದ ಆದಷ್ಟು ಬೇಗ ಗಂಡಿಗೆ ಶರಣಾಗುತ್ತಾಳೆ. ಆದರೆ ಇದನ್ನು ತೋರ್ಪಡಿಸುವುದು ತೀರಾ ವಿರಳ. ಈ ಗಂಡನ್ನು ತಾನು ಕಳೆದುಕೊಳ್ಳುವುದೆಂದರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತೇನೆಂಬ ಭಯ ಕಾಡುತ್ತಿರುತ್ತದೆ. ಜತೆಗೆ ಸಮಾಜವು ಸಹ ಪುರುಷನನ್ನು ಉನ್ನತ ಸ್ಥಾನಕ್ಕೆ ಏರಿಸಿರುವುದರಿಂದ ಆತನಿಗೆ ತನ್ನ ಸರ್ವಸ್ವ ತ್ಯಾಗ ಮಾಡುವುದೇ ತನ್ನ ಅಂತಿಮ ಗುರಿಯೆಂದು ಭಾವಿಸಿರುತ್ತಾಳೆ. ಈ ನಂಬಿಕೆಯು ಗೊತ್ತಿಲ್ಲದೆಯೇ ಮಾನಸಿಕವಾಗಿ ಒಳಹೊಕ್ಕಿದೆ. ಇದೇ ಸಂದರ್ಭವನ್ನು ಬಳಸಿಕೊಂಡು ಪುರುಷನು ತನ್ನ ದರ್ಪವನ್ನು ಹೆಣ್ಣಿನ ಮೇಲೆ ಮೆರೆಯುತ್ತಿದ್ದಾನೆ. ಆದರೆ ಇಂದು ಕಾಲ ಬದಲಾಗಿದ್ದರು ಮನಸ್ಸಿನ ಆಳದಲ್ಲಿ ಹೊಕ್ಕಿರುವ ವಿಚಾರಗಳನ್ನು ಅಷ್ಟು ಬೇಗ ಹೊರಹಾಕಲು ಸಾಧ್ಯವಾಗುವುದಿಲ್ಲ. ಹಾಗೆಯೇ ಹೆಣ್ಣು–ಗಂಡಿನ ವಿಷಯವಾಗಿ ಹೇಳಿದ ಕೆಲವು ವಿಚಾರಗಳು ಇಂದಿನ ಕಾಲಕ್ಕೆ ಅನ್ವಯವಾಗದೇ ಇರಲೂಬಹುದು. ಆದರೆ ಇದು ಸಾರ್ವಕಾಲಿಕ ಸತ್ಯವೂ ಆಗಿದೆ. ಸಮಾಜದಲ್ಲಿ ಸ್ತ್ರೀ ಪುರುಷರ ಭಾವನೆಗಳನ್ನ ವಿಭಿನ್ನ ದೃಷ್ಟಿಕೋನದಲ್ಲಿ ನೋಡಲಾಗುತ್ತದೆ. ಸಮಾಜವು ಭಾವನೆಗಳನ್ನು ಸ್ತ್ರೀ–ಪುರುಷರಲ್ಲಿ ಅಸಮಾನವಾಗಿ ಹಂಚಿರುವುದನ್ನು ಕಾಣಬಹುದು. ಭಾವನೆಗಳ ಹಂಚಿಕೆಯಲ್ಲಾಗಿರುವ ರಾಜಕಾರಣವು ನಿರ್ದಿಷ್ಟ ಸೀಮಾರೇಖೆಯೊಂದನ್ನು ಎಳೆದುಬಿಟ್ಟಿದೆ. ಸ್ತ್ರೀ ಗುಣಗಳೆಂದೇ ನಿರೂಪಿಸಲ್ಪಟ್ಟಿರುವ ಗುಣಗಳನ್ನ ಪುರುಷ ಅಭಿವ್ಯಕ್ತಿಸಿದರೆ ಅದು ಆತನ ದೌರ್ಬಲ್ಯವೆಂದು ಬಿಂಬಿತವಾಗುತ್ತದೆ. ಬಹುಶಃ ಈ ಕಾರಣದಿಂದಲೇ ಪುರುಷನ ಮಾನಸಿಕ ದೌರ್ಬಲ್ಯವನ್ನು ಪ್ರದರ್ಶಿತಗೊಳ್ಳಬಾರದೆಂದು ಆತನ ದೌರ್ಬಲ್ಯಗಳನ್ನ ಮರೆ ಮಾಡುವ ಪ್ರಯತ್ನಗಳು ನಡೆದಿದೆ ಎಂದರೆ ತಪ್ಪಾಗಲಾರದು. ಪುರುಷನು ತನ್ನ ಕೆಲವು ಭಾವನೆಗಳ ಅಭಿವ್ಯಕ್ತಿಯನ್ನು ಆದಷ್ಟು ಗೌಪ್ಯವಾಗಿಡಲು ಪ್ರಯತ್ನಿಸುತ್ತಾನೆ. ಸಮಾಜದ ಮುಂದೆ ಅದನ್ನ ಜಾಹಿರು ಮಾಡಲು ಹಿಂಜರಿಯುತ್ತಾನೆ. ಹಾಗೇನಾದರು ತನ್ನ ಭಾವನೆಗಳ ಅಭಿವ್ಯಕ್ತಿ ಮಾಡಿದರೆ ಆತನನ್ನು ಸಮಾಜವು ದುರ್ಬಲ ಮನಸ್ಸಿನವನೆಂದು ಹೀಯಾಳಿಸುತ್ತದೆ. ತಾನು ಸ್ತ್ರೀಗಿಂತ ಶಕ್ತಿಶಾಲಿ ಕೇವಲ ದೈಹಿಕವಾಗಷ್ಟೇ ಅಲ್ಲ, ಮಾನಸಿಕವಾಗಿಯೂ ದೃಢವಾಗಿರುವುದಾಗಿ ಚಿತ್ರಿಸಲು ಇಂತಹ ಮೌಲ್ಯಗಳನ್ನು ಪುರುಷ ಕೇಂದ್ರಿತ ಸಮಾಜವು ವೈಭವೀಕರಿಸಿರುವುದನ್ನು ಕಾಣಬಹುದು. ಆದರೂ ಪುರುಷನು

ಸಮಾಜದ ಎಲ್ಲೆಯನ್ನು ಮೀರಿ ನೈಸರ್ಗಿಕದತ್ತವಾದ ತನ್ನ ಭಾವನೆಗಳನ್ನು ವ್ಯಕ್ತಪಡಿಸಿರುವ ಸಂದರ್ಭಗಳನ್ನು ಸಾಹಿತ್ಯ ಕೃತಿಗಳ ಮೂಲಕ ಇಲ್ಲಿ ಚರ್ಚಿಸಲಾಗಿದೆ.

ಪ್ರಪಂಚದಾದ್ಯಂತದ ಪುರಾಣಗಳಲ್ಲಿ ವಿರಹವೇದನೆಯ ವಿಧವೆಯರು ತಮ್ಮ ಸತ್ತ ಗಂಡಂದಿರಿಗಾಗಿ ಶೋಕ ವ್ಯಕ್ತಪಡಿಸುವ ಅನೇಕ ಕಥೆಗಳಿವೆ. ಗಂಡ ಇಹಲೋಕ ತ್ಯಾಗ ಮಾಡಿದಾಗ ತಾವು ಅವರ ಜತೆ ಚಿತೆ ಏರಿ ಸತಿಯಾಗುವುದನ್ನು ಕಂಡಿದ್ದೇವೆ. ಆದರೆ ತಮ್ಮ ಹೆಂಡತಿಯರಿಗಾಗಿ ರೋದಿಸುವ, ವಿರಹವೇದನೆ ಅನುಭವಿಸುವ ವಿದುರರ ಸಂಖ್ಯೆ ಬಹಳ ಕಡಿಮೆ. ವಿಶ್ವ ಸಾಹಿತ್ಯದ ಕಥೆಗಳನ್ನು ಗಮನಿಸಿದಾಗ ಪ್ರಮುಖವಾಗಿ ಮೂರು ಕಥೆಗಳು ಲಭ್ಯವಾಗುತ್ತದೆ. ಒಂದು ಜಪಾನ್‌ನಿಂದ, ಇನ್ನೊಂದು ಗ್ರೀಸ್‌ನಿಂದ ಮತ್ತೊಂದು ಕಥೆ ಭಾರತದಿಂದ. ಈ ಎಲ್ಲಾ ಕಥೆಗಳಲ್ಲಿ ಸಾಮಾನ್ಯ ವಿಷಯ ಗಂಡನು ತನ್ನ ಸತ್ತ ಹೆಂಡತಿ/ಪ್ರೇಯಸಿಯನ್ನು ಮತ್ತೆ ಪಡೆಯಲು ಪ್ರಯತ್ನಿಸುತ್ತಾನೆ. ಅವನ ತ್ಯಾಗದಿಂದ ಮಾತ್ರ ಆತ ಯಶಸ್ವಿಯಾಗುತ್ತಾನೆ. ಪುರುಷನ ತ್ಯಾಗ, ಪ್ರೇಮದ ಪರಾಕಾಷ್ಠೆಯು ಈ ಮಹಾಕಾವ್ಯಗಳ ಜೀವಾಳವೆಂಬಂತೆ ವ್ಯಕ್ತವಾಗಿದೆ. ಪುರುಷನ ಅವ್ಯಕ್ತ ಭಾವನೆಗಳಿಗೆ ವಿವಿಧ ಸನ್ನಿವೇಶಗಳ ಮೂಲಕ ಅನಾವರಣಗೊಳಿಸಿರುವುದು ದೃಗ್ಗೋಚರವಾಗಿದೆ.

ಇಲ್ಲಿ ಪುರುಷ ಭಾವನಾ ಕೇಂದ್ರಿತ ವಿಶ್ವ ಸಾಹಿತ್ಯದಲ್ಲಿ ಅವಿತಿರುವ ಕೆಲವೊಂದು ನಿದರ್ಶನ ಕತೆಗಳನ್ನು ಚರ್ಚಿಸಲಾಗಿದೆ.

**ಕಥಾ ಅವಲೋಕನ**

ಜಪಾನಿನ ಪುರಾಣವು ಮೊದಲ ಮಾನವ ದಂಪತಿಗಳಾದ ಇಜಾನಗಿ ಮತ್ತು ಇಜಾನಾಮಿ ಎಂಬ ಮಾನವರ ಕಥೆಯನ್ನು ಹೇಳುತ್ತದೆ. ಜಪಾನಿನ ಗ್ರಾಮಗಳ, ದ್ವೀಪ ಸಮೂಹಗಳ, ಸಮಸ್ತ ಜನಸಮೂಹ, ಪ್ರಾಣಿ–ಪಕ್ಷಿಗಳ ಉದಯಕ್ಕೆ ಇವರು ಕಾರಣರಾಗಿರುತ್ತಾರೆ. ಒಂದೊಮ್ಮೆ ಅಚಾನಕ್ಕಾಗಿ ಅಗ್ನಿ ಹೊತ್ತಿಕೊಂಡು ಇಜಾನಾಮಿ ಮರಣ ಹೊಂದಿದಳು. ಇವಳ ಮೃತ್ಯುವಿನಿಂದ ಇಜಾನಗಿ ತುಂಬಾ ವಿಚಲಿತನಾಗಿ ಅವಳನ್ನು ಮರಳಿ ತರಲು ನಿರ್ಧರಿಸುತ್ತಾನೆ. ಅವನು ತನ್ನ ಹೆಂಡತಿಯನ್ನು ಕರೆತರಲು ಮೃತ್ಯುಲೋಕವಾದ ಯೋಮಿಗೆ ಹೋಗುವನು. ದುರದೃಷ್ಟವಶಾತ್ ಅವಳು ಯೋಮಿಯ ಆಹಾರವಾಗಿ ಸೇವಿಸಲ್ಪಟ್ಟಿದ್ದಳು ಮತ್ತು ಅದರಿಂದ ಹಿಂತಿರುಗಲು ಆಕೆಗೆ ಸಾಧ್ಯವಾಗುವುದಿಲ್ಲ. ತನ್ನ ಹೆಂಡತಿಯ ಶೋಕದಿಂದ ಹತಾಶನಾಗಿದ್ದ ಇಜಾನಗಿ ತನ್ನ ಹೆಂಡತಿಯನ್ನು ನೋಡಲು ಮೃತ್ಯುಲೋಕವನ್ನು ಪ್ರವೇಶಿಸಿ ಅಲ್ಲಿ ದೀಪಪುಂಜವನ್ನು ಬೆಳಗಿಸುತ್ತಾನೆ. ಮೃತ್ಯುಲೋಕದ ಭಯಾನಕತೆಗೆ ಅವಳ ಸುಂದರವಾದ ದೇಹವು ಕೊಳೆತುಹೋಗಿತ್ತು ಮತ್ತು ದೇಹವನ್ನು ತಿನ್ನುವ ಹುಳುಗಳಿಂದ ಆಕೆಯ ಶರೀರವು ಆವರಿಸಲ್ಪಟ್ಟಿರುವುದನ್ನು ಇಜಾನಗಿ ಕಂಡನು. ಆತ ಭಯದಿಂದ ಮೃತ್ಯುಲೋಕದಿಂದ ಓಡಿಹೋದನು,

ಇಜಾನಾಮಿಯು ಇಜಾನಗಿಯನ್ನು ಬೆನ್ನಟ್ಟಿದಳು. ತನ್ನ ಗಂಡನು ಇಲ್ಲೇ ಮೃತ್ಯುಲೋಕದಲ್ಲಿ ಉಳಿಯಬೇಕೆಂದು ಬಯಸುತ್ತಾಳೆ ಆದರೆ ಇಜಾನಗಿಯು ಅವಳಿಂದ ತಪ್ಪಿಸಿಕೊಳ್ಳುತ್ತಾನೆ. ಇಜಾನಗಿ ಅಂತಿಮವಾಗಿ ಭೂಮಿಗೆ ತಲುಪಿ ಮೃತ್ಯುಲೋಕದ ಪ್ರವೇಶದ್ವಾರವನ್ನು ಒಂದು ದೊಡ್ಡ ಬಂಡೆಯಿಂದ ಮುಚ್ಚಿದನು. ಅವನ ಕೃತ್ಯದಿಂದ ಕೋಪಗೊಂಡ ಹೆಂಡತಿಯು 'ನಾನು ಪ್ರತಿದಿನ ೧೦೦೦ ಜೀವಿಗಳನ್ನು ಕೊಲ್ಲುತ್ತೇನೆ' ಎಂದು ಕೂಗಿಕೊಂಡಳು. ನಂತರ ಇಜಾಗಿಯು 'ನಾನು ಪ್ರತಿದಿನ ೧೫೦೦ ಹೊಸ ಜೀವನವನ್ನು ಸೃಷ್ಟಿಸುತ್ತೇನೆ' ಎಂದು ಕೂಗಿ ಹೇಳುತ್ತಾನೆ. ಆದ್ದರಿಂದ ಇವರ ಕಥೆಯು ಶಾಶ್ವತ ಪ್ರತ್ಯೇಕತೆ ಮತ್ತು ಕಹಿ ಅನುಭವಗಳೊಂದಿಗೆ ಕೊನೆಗೊಳ್ಳುತ್ತದೆ.

ಅದೇ ರೀತಿ ಗ್ರೀಕ್ ಪುರಾಣಗಳಲ್ಲಿ ಆರ್ಫೀಯಸ್ ಮತ್ತು ಯೂರಿಡೈಸ್‌ಳ ಪ್ರೇಮ ಕತೆಯ ಉಲ್ಲೇಖವಾಗಿದೆ. ಅಪೋಲೋ ತನ್ನ ಮಗನಾದ ಆರ್ಫಿಯಸ್‌ಗೆ ಒಂದು ಲಯರ್(ವಾದ್ಯ) ಕೊಟ್ಟು ಅವನಿಗೆ ಹೇಗೆ ನುಡಿಸಬೇಕೆಂದು ಕಲಿಸುತ್ತಾನೆ. ಅವನ ಮಧುರವಾದ ಮೀಂಟುವಿಕೆಗೆ ಶತ್ರುಗಳು ಮತ್ತು ಪ್ರಾಣಿಗಳು ಮನಸೋತಿದ್ದರು ಎಂದು ಗ್ರೀಕ್ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಆರ್ಫಿಯಸ್ ಸೌಂದರ್ಯವನ್ನೇ ಮೈತಳೆದಿದ್ದ ಅನುಗ್ರಹದ ದೇವಿಯಂತಿದ್ದ ಯೂರಿಡೈಸ್‌ಳನ್ನು ಪ್ರೀತಿಸುತ್ತಾನೆ. ಮದುವೆಯಾದ ಕೆಲಕಾಲ ಇಬ್ಬರು ದಾಂಪತ್ಯ ಜೀವನದ ಸುಖವನ್ನು ಅನುಭವಿಸುತ್ತಾರೆ. ಹೀಗಿದ್ದಾಗ ಹೈಮನ್ ದೇವತೆಯು ಒಮ್ಮೆ ಇವರಿಗೆ ಆಶೀರ್ವದಿಸಲು ಕರೆದಾಗ ಅವರ ಪರಿಪೂರ್ಣ ದಾಂಪತ್ಯ ಜೀವನವನ್ನು ಉಳಿಯುವುದಿಲ್ಲವೆಂಬ ಭವಿಷ್ಯವಾಣಿಯನ್ನು ಮಾಡಲಾಗುತ್ತದೆ. ಭವಿಷ್ಯವಾಣಿಯಂತೆ ಯೂರಿಡೈಸ್ ಅಪ್ಸರೆಗಳೊಂದಿಗೆ ನೃತ್ಯ ಮಾಡುತ್ತಿದ್ದಾಗ ಹಾವು ಕಚ್ಚಿ ಸಾವನ್ನಪ್ಪುತ್ತಾಳೆ. ಮತ್ತೊಂದು ಕತೆಯ ಪ್ರಕಾರ ಕುರುಬನೊಬ್ಬ ಯೂರಿಡೈಸ್‌ಳ ಸೌಂದರ್ಯಕ್ಕೆ ಮರುಳಾಗಿ ಕಾಡಿನಲ್ಲಿ ಹಿಂಬಾಲಿಸಿದಾಗ ಹಾವು ಕಚ್ಚಿ ಯೂರಿಡೈಸ್ ಸಾವನ್ನಪ್ಪುತ್ತಾಳೆ. ಆರ್ಫಿಯಸ್ ತನ್ನ ದುಃಖವನ್ನು ಶೋಕಗೀತೆಯನ್ನು ಹಾಡುತ್ತಾನೆ. ಇದರಿಂದ ಜಗತ್ತಿನ ಸಮಸ್ತ ಜೀವ ನಿರ್ಜೀವ ವಸ್ತುಗಳು ದುಃಖವನ್ನು ಅನುಭವಿಸುತ್ತವೆ. ಮಾನವರು, ದೇವತೆಗಳು ಆರ್ಫಿಯಸ್‌ನ ಶೋಕವನ್ನು ಅರ್ಥ ಮಾಡಿಕೊಳ್ಳುತ್ತಾರೆ.

ಹೀಗೆ ಶೋಕದಲ್ಲಿದ್ದ ಆರ್ಫಿಯಸ್ ತನ್ನ ಹೆಂಡತಿಯನ್ನು ನೋಡಲು ಹೇಡಸ್‌ಗೆ ಹೋಗುವಂತೆ ಅಪೋಲೊ ಮತ್ತು ಅಪ್ಸರೆಯರು ಪ್ರೋತ್ಸಾಹಿಸುತ್ತಾರೆ. ಇವರ ಪ್ರೇರಣೆಯಿಂದಾಗಿ ಆರ್ಫಿಯಸ್ ಹೇಡಸ್‌ಗೆ ಹೋಗಲು ನಿರ್ಧರಿಸುತ್ತಾನೆ. ಹೇಡಸ್‌ಗೆ ಪ್ರವೇಶಿಸಿದೊಡನೆ ಸಾಮಾನ್ಯ ಮಾನವ ಸಾವನ್ನಪ್ಪುತ್ತಿದ್ದ, ಆದರೆ ದೇವತೆಗಳಿಂದ ರಕ್ಷಿಸಲ್ಪಟ್ಟ ಆರ್ಫಿಯಸ್ ಸ್ಟೈಜಿಯನ್ ಕ್ಷೇತ್ರಕ್ಕೆ ಪ್ರವೇಶಿಸಿ ಭೂತಗಳು ಮತ್ತು ಅಪರಿಚಿತ ಆತ್ಮಗಳ ಮೂಲಕ ಹಾದುಹೋಗುತ್ತಾನೆ. ಮೂರು ತಲೆಯ ನಾಯಿಯಾದ ಸೆರ್ಬರಸ್‌ನನ್ನು ತನ್ನ ಸಂಗೀತದ ಮೂಲಕ ಆಕರ್ಷಿಸಿ ಮುಂದೆ ಸಾಗುತ್ತಾನೆ. ನಂತರ ಅವನು ಗ್ರೀಕ್ ಭೂಗತ ಲೋಕದ ದೇವನಾದ ಹೇಡಸ್ ಮತ್ತು ಅವನ

ಹೆಂಡತಿ ಪರ್ಸಫೋನ್‌ನ ಎದುರು ಹಾಜರಾಗುತ್ತಾನೆ. ತನ್ನ ಸಂಗೀತದ ಮೂಲಕ ಹೇಡಸ್‌ನ ಮನವನ್ನು ಆಕರ್ಷಿಸುತ್ತಾನೆ. ಇವನ ಸಂಗೀತಕ್ಕೆ ಮನಸೋತ ಹೇಡಸ್ ಯೂರಿಡೈಸ್‌ಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಸಮ್ಮತಿಸಿ ಷರತ್ತೊಂದನ್ನು ವಿಧಿಸುತ್ತಾನೆ. ಅದೇನೆಂದರೆ ತನ್ನ ಹೆಂಡತಿಯನ್ನು ಭೂಗತ ಜಗತ್ತಿನ ಕತ್ತಲ ಗುಹೆಗಳಿಂದ ಬೆಳಕಿನೆಡೆಗೆ ಕರೆದುಕೊಂಡು ಬರುವಾಗ ಯೂರಿಡೈಸ್ ಅವನನ್ನು ಹಿಂಬಾಲಿಸಬೇಕು. ಬೆಳಕಿನಲ್ಲಿ ಬರುವುದಕ್ಕೆ ಮುಂಚೆ ಆರ್ಫಿಯಸ್ ಯೂರಿಡೈಸ್‌ನ್ನು ನೋಡುವಂತಿಲ್ಲ, ಹಾಗೇನಾದರು ಆತನು ಆಕೆಯನ್ನು ಕತ್ತಲೆಯಲ್ಲಿ ಕಂಡರೆ ಆರ್ಫೀಯಸ್ ಯೂರಿಡೈಸ್‌ಳನ್ನು ಶಾಶ್ವತವಾಗಿ ಕಳೆದುಕೊಳ್ಳುವನು. ತಾನು ಹೇಳಿದ್ದನ್ನು ಪಾಲಿಸಿದರೆ ಯೂರಿಡೈಸ್‌ನ್ನು ಶಾಶ್ವತವಾಗಿ ಸದಾ ಅವಳೊಂದಿಗೆ ವಾಸಿಸಬಹುದೆಂದು ಎಚ್ಚರಿಕೆಯನ್ನು ನೀಡಿ ಕಳುಹಿಸುತ್ತಾನೆ. ದೇವಪುತ್ರನಾದ ನನಗೆ ಇದು ಸರಳ ಕೆಲಸವೆಂದು ಅರಿತು ಸಂತೋಷಗೊಂಡ ಆರ್ಫಿಯಸ್ ಹೇಡಸ್‌ಗೆ ಧನ್ಯವಾದಗಳನ್ನು ಸಲ್ಲಿಸಿ ಭೂಗತ ಜಗತ್ತಿಗೆ ಪ್ರವೇಶಿಸುತ್ತಾನೆ. ದೇವರ ಆಜ್ಞೆಯಂತೆ ಯೂರಿಡೈಸ್‌ಳನ್ನು ಭೂಗತ ಲೋಕದಿಂದ ವಾಸ್ತವ ಲೋಕಕ್ಕೆ ಕರೆತರುವಾಗ ಆಕೆ ದಾರಿಯುದ್ದಕ್ಕು ತುಳಿಯುತ್ತಿದ್ದ ತರಗೆಲೆಗಳ ಶಬ್ಧ ಒಂದೆಡೆ ಕೇಳಬರದಿದ್ದಾಗ, ದೇವತೆಗಳು ತನ್ನೊಂದಿಗೆ ಮೋಸ ಮಾಡಿರುವುದಾಗಿ ತಿಳಿದು ತನ್ನ ಹಿಂದೆ ನೆರಳಾಗಿದ್ದ ಯೂರಿಡೈಸ್ ಈಗ ಒಂದೆರೆಡು ಹೆಜ್ಜೆಗಳ ಅಂತರದಲ್ಲಿ ಮಾನವಳಾಗುವದಷ್ಟರಲ್ಲಿ ಆರ್ಫೀಯಸ್ ಹಿಂದಿರುಗಿ ನೋಡುತ್ತಾನೆ. ಯೂರಿಡೈಸ್ ಕತ್ತಲೆಯಲ್ಲಿ ಮಂಜಿನಂತೆ ಕರಗುತ್ತಾಳೆ. ಪುನಃ ಯೂರಿಡೈಸ್ ಸತ್ತವರ ಲೋಕದಲ್ಲಿ ಸೇರಿಕೊಳ್ಳುತ್ತಾಳೆ. ಈಗ ಈಕೆಯು ಶಾಶ್ವತವಾಗಿ ಹೇಡಸ್‌ನ ಮೃತಲೋಕದಲ್ಲಿ ಸಿಕ್ಕಿಕೊಳ್ಳುತ್ತಾಳೆ.

ಆರ್ಫೀಯಸ್ ಭೂಗತ ಜಗತ್ತಿಗೆ ಮರಳಲು ಪ್ರಯತ್ನಿಸಿದನು. ಆದರೆ ಮನುಷ್ಯನು ಎರಡು ಬಾರಿ ಜೀವಂತವಾಗಿ ಹೇಡಸ್‌ಗೆ ಪ್ರವೇಶಿಸಲು ಸಾಧ್ಯವಿಲ್ಲ. ಒಂದೇ ಪುರಾಣದ ಎರಡು ವಿಭಿನ್ನ ಆವೃತ್ತಿಗಳಿವೆ. ಮೊದಲ ಆವೃತ್ತಿಯ ಪ್ರಕಾರ ಆರ್ಫೀಯಸ್ ತನ್ನ ಭಾವಗೀತೆಯೊಂದಿಗೆ ಶೋಕಗೀತೆಯನ್ನು ನುಡಿಸಲು ಪ್ರಾರಂಭಿಸಿದನು. ಅವನು ಯುರಿಡೈಸ್‌ನೊಂದಿಗೆ ಶಾಶ್ವತವಾಗಿ ಒಂದಾಗಲು ಸಾವಿಗೆ ಕರೆ ನೀಡಿದನು. ಮೃಗಗಳು ಅವನನ್ನು ಹರಿದುಬಿಟ್ಟವು, ಅಥವಾ ಬಹುಶಃ ಮೇನಾಡ್ಸ್‌ನ ಮತ್ತೊಂದು ಆವೃತ್ತಿಯ ಪ್ರಕಾರ ಜೀಯಸ್ ಎಂಬ ದೇವತೆಯು ಆರ್ಫೀಯಸ್ ಮೃತ್ಯುಲೋಕದ ರಹಸ್ಯಗಳನ್ನು ಮಾನವರಿಗೆ ಬಹಿರಂಗಪಡಿಸುತ್ತಾನೆಂದು ಮಿಂಚಿನಿಂದ ಕೊಲ್ಲಲ್ಲು ನಿರ್ಧರಿಸುತ್ತಾನೆ. ಏನೇ ಇರಲಿ, ಆರ್ಫೀಯಸ್ ಮರಣ ಹೊಂದಿದನು ಆದರೆ ಮ್ಯೂಸಸ್ ಆತನ ತಲೆಯನ್ನು ಉಳಿಸಿಕೊಂಡು ಅದರ ಮೂಲಕ ಅವನು ಸದಾಕಾಲ ಹಾಡಲು, ಅವನ ಶೋಕಗೀತೆಗಳು ಜೀವಂತವಾಗಿರಲೆಂದು ಅವನ ತಲೆಯನ್ನು ಜನರ ನಡುವೆ ಇಡಲು ನಿರ್ಧರಿಸಿದನು. ಅದರಂತೆ ಆರ್ಫೀಯಸ್ ಸುಂದರವಾದ ಮಧುರ ಸ್ವರಗಳಿಂದ ಎಲ್ಲರನ್ನೂ ಮೋಡಿಮಾಡುತ್ತಿದ್ದನು. ಈ ಕಥೆಯು ಪ್ರತ್ಯೇಕತೆ ಮತ್ತು ವಿಷಣ್ಣತೆಯೊಂದಿಗೆ ಕೊನೆಗೊಳ್ಳುತ್ತದೆ.

ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 48 – 60

**ಬೈಬಲ್ ದೃಶ್ಯದೊಂದಿಗೆ ಹೋಲಿಕೆ**

ಮೇಲಿನ ಪುರಾಣವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಪ್ರಾಚೀನ ಗ್ರೀಕ್ ಪುರಾಣ ಮತ್ತು ಬೈಬಲ್‌ನ ಒಂದು ದೃಶ್ಯದ ನಡುವಿನ ಹೋಲಿಕೆಯನ್ನು ಕಾಣಬಹುದು. ಆರ್ಫೀಯಸ್ ಮತ್ತು ಯೂರಿಡೈಸಳ ಪುರಾಣವು ಪ್ರವಾದಿ ಲೂತ್ ಕಥೆಯನ್ನು ಹೋಲುತ್ತದೆ. 'ಹಿಂತಿರುಗಿ ನೋಡುವಂತಿಲ್ಲ' ಎಂಬ ಸಾದೃಶ್ಯವು ಎರಡೂ ಕಥೆಗಳಿಗೆ ಹೆಚ್ಚಿನ ಮಹತ್ವದ್ದಾಗಿದೆ. ಬೈಬಲ್ ಮತ್ತು ಕುರ್‌ಆನ್ ಗ್ರಂಥಗಳಲ್ಲಿ ಪಾಪ ಕೃತ್ಯಗಳಲ್ಲಿ ಮುಳುಗಿದ್ದ ಸೊಡೊಮ್ ಮತ್ತು ಗೊಮೊರ ನಗರಗಳನ್ನು ದೇವರು ನಾಶಮಾಡಲು ನಿರ್ಧರಿಸಿ ಆ ಎರಡು ನಗರಗಳನ್ನು ಮುಳುಗಿಸುತ್ತಿದ್ದಾಗ, ಸಜ್ಜನನಾದ ಪ್ರವಾದಿ ಲೂತ್ ತನ್ನ ಕುಟುಂಬದೊಂದಿಗೆ ಆ ಪ್ರದೇಶವನ್ನು ತೊರೆದು ಹೋಗುವಂತೆ ದೇವರು ಆದೇಶಿಸುತ್ತಾನೆ. ನಾಶವಾಗುತ್ತಿರುವ ನಗರವನ್ನು ಹಿಂತಿರುಗಿ ನೋಡದೆ ಪರ್ವತಗಳ ಕಡೆಗೆ ಹೋಗಬೇಕೆಂದು ದೇವರು ಅವರಿಗೆ ಹೇಳಿದನು. ಅವರು ನಗರವನ್ನು ತೊರೆಯುತ್ತಿರುವಾಗ, ಪ್ರವಾದಿ ಲೂತ್‌ನ ಹೆಂಡತಿ ದೇವರ ಆಜ್ಞೆಯನ್ನು ಉಪೇಕ್ಷಿಸಿ ಸುಡುತ್ತಿರುವ, ಮುಳುಗುತ್ತಿರುವ ನಗರಗಳನ್ನು ನೋಡಲು ಹಿಂತಿರುಗಿದಾಗ ಅವಳು ತಕ್ಷಣ ಉಪ್ಪಿನ ಕಂಬವಾಗಿ ರೂಪಾಂತರಗೊಂಡಳು, ದೇವರ ಕಡೆಗೆ ಅವಿಧೇಯತೆಗೆ ನೇರ ಮತ್ತು ಭಯಾನಕ ಪರಿಣಾಮವೆಂದು ಇದನ್ನು ವಿವರಿಸಬಹುದು.

ಜೈನ ಪರಂಪರೆಯಲ್ಲಿರುವ ಪಂಪನ ಆದಿಪುರಾಣದ ನೀಲಾಂಜನೆಯ ಸಾವಿನ ಸಂದರ್ಭದಲ್ಲಿ ಆದಿದೇವನ ಶೋಕ, ಸಾವಿನ ನಂತರ ಆತನಲ್ಲಿ ಜ್ಞಾನದ ಹೊಳಹು ಉಂಟಾಗುವುದು, ಸಾವಿನ ಸಂದರ್ಭ ಮತ್ತು ಪ್ರೀತಿಸುವ ವಸ್ತು/ವ್ಯಕ್ತಿಯನ್ನು ಕಳೆದುಕೊಂಡಾಗ ಎಂಬುದು ಗಮನಿಸಬೇಕಾದ ವಿಷಯವಾಗಿದೆ. ಸಾವು ಮಾನವನಲ್ಲಿ ಸುಪ್ತಗೊಂಡಿರುವ ಭಾವನೆಗಳನ್ನು ವ್ಯಕ್ತಪಡಿಸುವ ಘಟನೆಯಾಗಿ ಚಿತ್ರಿತಗೊಂಡಿದೆ. ಯಾವುದೇ ಸಂದರ್ಭದಲ್ಲೂ ತನ್ನ ಭಾವನೆಗಳನ್ನು ಹರಿಯಬಿಡದ ಪುರುಷ ಕೆಲವೊಂದು ಸೂಕ್ಷ್ಮ ಸಂದರ್ಭಗಳಲ್ಲಿ ಭಾವನೆಗಳನ್ನು ಅದುಮಿಡದೆ, ಭಾವಾವೇಶಗೊಳ್ಳುವುದು ಆತನ ಸುಪ್ತಭಾವನೆಗಳ ಓತಪ್ರೋತ ಹರಿವಾಗಿ ಕಂಡುಬರುತ್ತದೆ. ಸೆಮೆಟಿಕ್ ಧರ್ಮಗಳಲ್ಲಿ ಬರುವಂತಹ ಮಾನವ ಇತಿಹಾಸದ ಮೊದಲ ಸಾವಿನ ವರ್ಣನೆಯಲ್ಲಿ ಕೊಲೆಗಾರನು ತನ್ನ ಸಹೋದರನ ಸಾವಿನಿಂದ ವಿಚಲಿತನಾಗುವುದಿಲ್ಲ, ದುಃಖತಪ್ತನಾಗುವುದಿಲ್ಲ, ಆದರೆ ತನ್ನ ಪ್ರೀತಿಯ ಹಂಬಲಕ್ಕಾಗಿ ಹೋರಾಡಿ ಅಧಃಪತನವನ್ನು ಹೊಂದುತ್ತಾನೆ. ಇಲ್ಲಿ ಜೀವನವು ಪ್ರೀತಿ ಮತ್ತು ಸಾವಿನ ನಡುವೆಯೇ ಸುತ್ತುವುದು ಗಮನಾರ್ಹ.

ಹಿಂದೂ ಪುರಾಣವು ತನ್ನ ಭಾವಿ ಹೆಂಡತಿಯನ್ನು ಪ್ರೀತಿಸುತ್ತಿದ್ದ ರುರು ಮತ್ತು ಅವನ ಪತ್ನಿ ಪ್ರಿಯಂವದ ಅವರ ಕಥೆಯನ್ನು ವರ್ಣಿಸಲಾಗಿದೆ. ಭೃಗು ಮಹರ್ಷಿಯ ವಂಶದವರಾದ ರುರು ಮಹರ್ಷಿಯು ಪ್ರಮತಿ

ಋಷಿಯ ಮಗ ಮತ್ತು ಭೃಗು ಮಹರ್ಷಿಯ ಮೊಮ್ಮಗನಾಗಿರುತ್ತಾನೆ. ಮೇನಕ ಮತ್ತು ವಿಶ್ವವಸುನೆಂಬ ಗಂಧರ್ವನಿಗೆ ಹುಟ್ಟಿದ ಮಗುವೇ ಪ್ರಿಯಂವದ ಅಥವಾ ಪ್ರಮದ್ವರ. ಮೇನಕೆಯು ಪ್ರಿಯಂವದ ಹುಟ್ಟಿದಾಗಲೇ ನದಿಯ ತಡದಲ್ಲಿ ಬಿಟ್ಟು ಸ್ವರ್ಗಕ್ಕೆ ಪಯಣ ಬೆಳೆಸಿದಳು. ಆಗ ಸ್ಥೂಲಕೇಶನೆಂಬ ಋಷಿಯು ಆಕೆಯನ್ನು ಸಾಕಿ ಸಲಹಿದರು. ರುರು ಆಕೆಯ ಅಪ್ರತಿಮ ಸೌಂದರ್ಯವನ್ನು ನೋಡಿ ದಿಗ್ಭ್ರಾಂತನಾಗಿ ಆಕೆಯೊಂದಿಗೆ ವಿವಾಹವಾಗಲು ಗುರುಹಿರಿಯರ ಆಶೀರ್ವಾದದಂತೆ ಮದುವೆಯ ದಿನವನ್ನು ನಿಶ್ಚಯಿಸಲಾಗುತ್ತದೆ. ಆದರೆ ವಿಧಿಯ ಆಟವೋ ಎಂಬಂತೆ ಪ್ರಿಯಂವದೆಯನ್ನು ಕಾಡಿನಲ್ಲಿ ವಿಷಕಾರಿ ಹಾವು ಕಚ್ಚಿದುದರ ಪರಿಣಾಮವಾಗಿ ಸಾವನ್ನಪ್ಪುತ್ತಾಳೆ. ಈ ವಿಷಯದ ನೈಜತೆಯ ಕಲ್ಪನೆಯೇ ಮಾಡಲಾರದ ರುರು ಶೋಕದ ಮಡುವಿನಲ್ಲಿ ಮುಳುಗುತ್ತಾನೆ. ಆಗ ಮೃತ್ಯು ದೇವತೆ ಯಮರಾಯನನ್ನು ಆಹ್ವಾನಿಸಿ ಪ್ರಿಯಂವದೆಗೆ ಪ್ರಾಣ ಭಿಕ್ಷೆ ನೀಡಲು ಬೇಡಿಕೊಳ್ಳುತ್ತಾನೆ. ಆದರೆ ಯಾವುದಾದರು ತ್ಯಾಗ ಅಥವಾ ವಿನಿಮಯದ ಹೊರತು ಜೀವ ದಾನ ನೀಡಲಾಗುವುದಿಲ್ಲವೆಂದು ಯಮ ನಿರಾಕರಿಸಿದಾಗ, ರುರು "ನನ್ನ ಜೀವನದ ಉಳಿದ ಭಾಗವನ್ನು ತೆಗೆದುಕೊಂಡು ಅವಳಿಗೆ ಕೊಡು" ಎಂದು ಕೇಳಿಕೊಳ್ಳುತ್ತಾನೆ. ಹಿಂದೂ ಪುರಾಣಗಳಲ್ಲಿ ಬಹುಶಃ ವಿಶ್ವ ಪುರಾಣಗಳಲ್ಲಿ ಮನುಷ್ಯನು ತನ್ನ ಪ್ರಿಯತಮೆಯನ್ನು ಉಳಿಸಲು ತನ್ನನ್ನು ತ್ಯಾಗ ಮಾಡಿದ ಏಕೈಕ ಪ್ರಕರಣ ಇದು. ಯಮ ಇಷ್ಟವಿಲ್ಲದೆ ಒಪ್ಪುತ್ತಾನೆ. ಇದರಿಂದ ಪ್ರಿಯಂವದ ಜೀವಂತಗೊಳ್ಳುತ್ತಾಳೆ. ಅವಳು ಹಿಂತಿರುಗಿ ತನ್ನ ಪತಿ ಇರುವವರೆಗೂ ಸಂಸಾರ ಸುಖವನ್ನು ಅನುಭವಿಸುತ್ತಾಳೆ.

ಈ ಕಥೆಯು ಪ್ರಕ್ಷಿಪ್ತವೆಂದು ಹಲವಾರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕಾರಣ ಸತ್ಯವಾನ್–ಸಾವಿತ್ರಿಯ ಕಥೆಗೆ ಸಂವಾದಿಯಾಗಿ ಪುರುಷನ ಪ್ರೇಮವು ಸ್ತ್ರೀ ಪ್ರೇಮಕ್ಕಿಂತ ಕಡಿಮೆಯಿಲ್ಲವೆಂದು ಸಾಬೀತುಪಡಿಸಲು ಮತ್ತೊಂದು ಕಥೆಯ ಸೃಷ್ಟಿಯಾಗಿಬೇಕೆಂದು ಅನುಮಾನಿಸಲಾಗಿದೆ.

ಎರಡೂ ಕಥೆಗಳಲ್ಲಿ ಯಮರಾಯನನ್ನು ತಡೆದು ತಮ್ಮ ಸಂಗಾತಿಗಳನ್ನು ಮೃತ್ಯುಲೋಕದಿಂದ ಜೀವಂತ ಭೂಮಿಗೆ ಹಿಂತಿರುಗಿ ತರಲಾಗಿದೆ. ಆದರೂ ಮಹಿಳೆ ಪುರುಷನ ಜೀವವನ್ನು ಉಳಿಸುವ ಸಾವಿತ್ರಿ ಕಥೆ, ರುರು ಕಥೆಗಿಂತ ಹೆಚ್ಚು ಜನಪ್ರಿಯವಾಗಿದೆ. ಇದರಲ್ಲಿ ಪುರುಷನು ಮಹಿಳೆಯ ಜೀವವನ್ನು ಉಳಿಸುತ್ತಾನೆ. ಇದು ನಾವು ವಾಸಿಸುವ ಸಮಯವನ್ನು ಪ್ರತಿಬಿಂಬಿಸುತ್ತದೆ. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಮಹಿಳೆಯ ಪಾವಿತ್ರ್ಯತೆ, ಶುಚಿತ್ವ ಮತ್ತು ನಿಷ್ಠೆಯು ತನ್ನ ಗಂಡನ ಜೀವನದ ದೀರ್ಘಾಯುಷ್ಯವನ್ನು ಖಾತ್ರಿಪಡಿಸುತ್ತದೆ. ಅವಳು ವಿಧವೆಯಾಗಿದ್ದರೆ ಅವಳು ಸಾಕಷ್ಟು ಪರಿಶುದ್ಧಳಾಗಿರುವುದಿಲ್ಲ ಎಂಬುದು ಸಹ ಸತಿ ಅಭ್ಯಾಸಕ್ಕೆ ಕಾರಣವಾಗಿದೆ. ಇದರಲ್ಲಿ ವಿಧವೆಯೊಬ್ಬಳು ತನ್ನ ಗಂಡನ ಅಂತ್ಯಕ್ರಿಯೆಯ ವೇಳೆ ತನ್ನನ್ನು ತಾನು ಸತ್ತ ಗಂಡ ಚಿತೆಗೆ ಸಮರ್ಪಿಸಿಕೊಂಡು ತನ್ನ ಪತಿ ನಿಷ್ಠೆಯನ್ನು ಸಾಬೀತುಪಡಿಸುತ್ತಾಳೆ.

ಸತ್ಯವಾನನನ್ನು ಬದುಕಿಸುವ ಸಾವಿತ್ರಿಯ ಸಂದರ್ಭದಲ್ಲಿ ಭಕ್ತಿ ಮತ್ತು ಯುಕ್ತಿ ಮುಖ್ಯ ಸಾಧನವಾಗಿ ಕಾರ್ಯ ನಿರ್ವಹಿಸಿದರೆ. ಆರ್ಫಿಯಸ್‌ನ ಸಂದರ್ಭದಲ್ಲಿ ಸಂಗೀತ ಮುಖ್ಯಸಂಗತಿಯಾಗಿದೆ. ಇಲ್ಲಿ ಯಮನ ಸೋಲಲ್ಲ, ಯಮನ ಗೆಲುವು ಪ್ರಕೃತಿ ನಿಯಮದಂತೆ ಪ್ರತಿಯೊಬ್ಬನಿಗೂ ಸಾವು ಶತಸಿದ್ಧ ನೆಪಗಳೇನೇ ಇರಲಿ ಸಾವು ಸತ್ಯ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಭಕ್ತಿಯ ಮಹತ್ವ ಸಾರಲು ಯುಕ್ತಿಯಿಂದ ಹೇಗೆ ಯಮನಿಂದ ತನ್ನ ಗಂಡನ ಪ್ರಾಣ ರಕ್ಷಣೆ ಮಾಡಿದಳೆಂಬುದನ್ನು ಸಾಬೀತುಪಡಿಸಲು ಇಂತಹ ಉದಾಹರಣೆಗಳನ್ನು ನೀಡಲಾಗಿದೆ. ಗ್ರೀಕ್ ಸಾಹಿತ್ಯ ಲೋಕವು ವಾಸ್ತವಿಕತೆಯ ದೃಷ್ಟಿಯಲ್ಲಿ ಜೀವನವನ್ನು ನೋಡಿದರೆ. ಕಲ್ಪನಾಲೋಕ ಮತ್ತು ಅಲೌಕಿಕ ಜಗತ್ತನ್ನು ಒಟ್ಟುಗೂಡಿಸಿ ನೋಡುವ ಪ್ರವೃತ್ತಿ ಭಾರತೀಯ ಪುರಾಣ ಸಾಹಿತ್ಯದಲ್ಲಿ ಕಾಣಬಹುದು. ಜಪಾನಿನ ಕತೆಯಲ್ಲಿ ಸಾವಿನ ಭೀಕರತೆಯನ್ನು ಕಾಣದ ಮಾನವನ ದೃಶ್ಯ ಮತ್ತು ಸಾಮಾಜಿಕ ಕಳಕಳಿ, ಪ್ರಕೃತಿಯ ಸಮತೋಲನಕ್ಕೆ ಮಾನವನ ಶ್ರಮವನ್ನು ಇಲ್ಲಿ ಕಾಣಬಹುದು.

ಆದರೆ ಆರ್ಫೀಯಸ್‌ನ ಎಲ್ಲಾ ಪುನರಾವರ್ತನೆಗಳ ನಾಟಕ, ಕಾದಂಬರಿಗಳ ಪೈಕಿ ಈತನೊಬ್ಬ ದೇವರಂತಹ ಸಂಗೀತಗಾರ, ಆದರೂ ಈತ ಸಾಹಿತ್ಯಾಭ್ಯಾಸಿಗಳಿಗೆ ಹೆಚ್ಚು ಕಾಡುವವನಾಗಿದ್ದಾನೆ. ಸತ್ತವರ ಭೂಮಿಯಲ್ಲಿ ತನ್ನ ಪ್ರಿಯತಮೆಯನ್ನು ಹುಡುಕುವುದು. ಶತಮಾನಗಳವರೆಗೆ ಪುನರಾವರ್ತಿತ ಕಥೆ ಹೇಳುವ ಪ್ರಕ್ರಿಯೆಯ ನಂತರವೂ ಇದು ಹೀಗೇ ಇದೆ. ಗ್ರೀಕ್ ಪುರಾಣ ಸೂಚ್ಯಂಕ ಹೇಳುವಂತೆ 'ಈ ರೀತಿಯಾಗಿ ಪರಿಪೂರ್ಣವಾಗಿ ಕೆಲಸ ಮಾಡುವುದು ಕಾವ್ಯಾತ್ಮಕ ಬೆಳವಣಿಗೆಯ ಹಾದಿಯ ಅಂತ್ಯ, ಮತ್ತು ಪ್ರಾರಂಭವಲ್ಲ ಎಂಬುದು ಸ್ಪಷ್ಟವಾಗಿದೆ.' ಹಾಗಾದರೆ ಈ ಕಥೆಯ ಸಾರವನ್ನು ಹಲವು ಲೇಖಕರು, ನಾಟಕಕಾರರು ಇಷ್ಟು ದಿನ ಏಕೆ ಸರಿಪಡಿಸಿದ್ದಾರೆ? ಆರ್ಫೀಯಸ್‌ನ ಆಕೃತಿಯ ಅರ್ಥವೇನು? ಇದು ನಿಗೂಢ, ಓದುಗನನ್ನು ಪ್ರಶ್ನೆಗಳ ಕೂಪಕ್ಕೆ ತಳ್ಳುವುದೇ ನಿರೂಪಕನ ಉದ್ದೇಶವಾಗಿದ್ದರೆ, ಭಾರತೀಯ ಸುಖಾಂತ್ಯದ ಮಹಾಕಾವ್ಯ, ನಾಟಕ, ಕಾದಂಬರಿಗಳ ಉದ್ದೇಶ ಅಪರಿಪೂರ್ಣವೇ?

ಆರ್ಫೀಯಸ್‌ನ ಪರಂಪರೆಯನ್ನು ಪರಿಗಣಿಸುವ ಹಲವು ಮಾರ್ಗಗಳಿವೆ ಅದರಲ್ಲಿ ಆಧ್ಯಾತ್ಮಿಕ ಮತ್ತು ಅವನ ಪ್ರೀತಿ, ಲೈಂಗಿಕತೆ ಮತ್ತು ಲಿಂಗದ ಕುರಿತ ಚರ್ಚೆಗಳಿಗೆ ಒಂದು ಪ್ರಮುಖ ತಾಣವಾಗಿದೆ. ಎರಡನೇ ಬಾರಿಗೆ ಯೂರಿಡೈಸ್‌ಅನ್ನು ಕಳೆದುಕೊಂಡ ನಂತರ ಆರ್ಫೀಯಸ್ ಮಹಿಳೆಯರನ್ನು ಅಸಹ್ಯಪಡಲು ಪ್ರಾರಂಭಿಸಿದ ಮತ್ತು ಪೆಡರಾಸ್ಟಿಗೆ ತಿರುಗಿದನು ಎಂದು ಓವಿಡ್ ಹೇಳುತ್ತಾನೆ. ಆರ್ಫೀಯಸ್‌ಗೆ ಸಾವು ಸೃಷ್ಟಿಸುವ ಸಮಸ್ಯೆಗೆ ಇದು ಎಂದಿಗೂ ಉತ್ತಮ ಪರಿಹಾರವೆಂದು ನಮಗೆ ತೋರುವುದಿಲ್ಲ. ಯೂರಿಡೈಸ್ ಇದ್ದಂತೆಯೇ ಬಹುಶಃ ಆರ್ಫೀಯಸ್‌ನ ಕಿರಿಯ ಪುರುಷ ಪ್ರೇಮಿಯನ್ನು ಕಸಿದುಕೊಳ್ಳಬಹುದು. ಅದರಂತೆ ಓವಿಡ್‌ನ ಪ್ರಕಾರ ಗ್ರೀಕರಿಗೆ ಸಲಿಂಗಕಾಮದ ಪರಿಚಯದೊಂದಿಗೆ ಆರ್ಫೀಯಸ್‌ನನ್ನು ಸಂಯೋಜಿಸುವ ಒಂದು ಸಾಮಾನ್ಯ

ಸಂಪ್ರದಾಯವನ್ನು ಹುಟ್ಟುಹಾಕಿತು – ಈ ಸಂಪ್ರದಾಯವು ಸಾಮಾನ್ಯವಾಗಿ ಸಲಿಂಗಕಾಮಿ ಪರವಾಗಿ ಹುಟ್ಟಿಕೊಂಡಿತು. ಆದರೆ ಸಲಿಂಗಕಾಮಿಗಳ ದೀರ್ಘ ಇತಿಹಾಸವನ್ನು ಹೇಳಲು ಆರ್ಫೀಯಸ್‌ನ ಉದಾಹರಣೆಯನ್ನು ಹಲವಾರು ಇತ್ತೀಚಿನ ಸಂಶೋಧನೆ ಮತ್ತು ಆಲೋಚನ ಕ್ರಮಗಳು ಪ್ರಾರಂಭಿಸಿವೆ. ಹಾಗೆಯೇ ಯೂರಿಡೈಸ್‌ಗಾಗಿ ಆತನ ಹುಡುಕಾಟವು ಮಾನವ ದೈವತ್ವದ ಹುಡುಕಾಟಕ್ಕೆ ಹೊರಟು ಪಡೆದೇ ಎಂದು ತಿಳಿದರೂ ಪಡೆಯದ ಮನಃಸ್ಥಿತಿಯನ್ನು ಸೂಚಿಸುತ್ತದೆ. ದೇವರನ್ನು ಪಡೆಯುವ ಹಲವು ಮಾರ್ಗಗಳಿರುತ್ತವೆ. ಯಾವೊಂದು ಮಾರ್ಗದಲ್ಲಿ ನಡೆದರು ಆತನ ಲಭ್ಯ ಸಾಧ್ಯ. ಆದರೆ ಆತನ ಸಾಕ್ಷಾತ್ಕಾರ ಅಥವಾ ಆತನನ್ನು ಪಡೆಯುವಿಕೆಯ ಹಂಬಲದ ಪರಾಕಾಷ್ಠೆಯಿಂದ ಆಗುವ ಅನಾಹುತಗಳ ಬಗ್ಗೆ ಈ ಕಥೆಯು ಸೂಚ್ಯವಾಗಿಸುತ್ತದೆ.

ಹೆಚ್ಚಿನ ಮಾನವ ಜೀವಿಗಳು ತಮ್ಮ ಜೀವನವನ್ನು ಪ್ರಾಯೋಗಿಕತೆ ಮತ್ತು ಪ್ರಮಾಣೀಕರಣದಿಂದ ನಿರ್ವಹಿಸುತ್ತಾರೆ. ಹಾಗೆಯೇ ನಾವೂ ಸಹ ನಿರಂತರವಾಗಿ ಅರ್ಥದೊಂದಿಗೆ ಕುಸ್ತಿಯಾಡುತ್ತೇವೆ. ಒಂದು ದೊಡ್ಡ ಕಥೆಯು ಒಂದು ರೀತಿಯ ಅಗಾಧವಾದ ಅದೃಶ್ಯ ದೇವಾಲಯವಾಗಿದ್ದು, ಇದು ಧರ್ಮ ಅಥವಾ ಧರ್ಮವಿಲ್ಲದ ದೇವಾಲಯವಾಗಿರಬಹುದು ಆಗ ಇಂತಹ ಪ್ರಕ್ರಿಯೆಯು ಸಂಭವಿಸುತ್ತದೆ. ಆದರೆ ಅದರಲ್ಲಿ ನಾವು ನಮ್ಮ ಅತ್ಯಂತ ಜ್ವಲಂತ ಪ್ರಶ್ನೆಗಳನ್ನು ಎದುರಿಸಬಹುದು. ಅಂತಹ ನಿರೂಪಣೆಗಳು ನಾವು ಹೇಗೆ ಬದುಕುತ್ತೇವೆ, ಪರಸ್ಪರ ಹೇಗೆ ವರ್ತಿಸುತ್ತೇವೆ. ನಮ್ಮನ್ನು ಮತ್ತು ಈ ಜಗತ್ತನ್ನು ಹೇಗೆ ನೋಡುತ್ತೇವೆ ಎಂಬುದರ ಮೇಲೂ ಪ್ರಭಾವ ಬೀರಬಹುದು. ಈ ಸಂದರ್ಭದಲ್ಲಿ ಆರ್ಫೀಯಸ್‌ನ ಕಥೆ ಅನನ್ಯವಾಗಿ ಶಕ್ತಿಯುತವಾಗಿದೆ. ಇ.ಎಂ. ಫಾರ್ಸ್ಟರ್ ಹೇಳುವಂತೆ ಸಾವು ಮನುಷ್ಯನನ್ನು ನಾಶ ಮಾಡುತ್ತದೆ, ಆದರೆ ಸಾವಿನ ಕುರಿತ ಚಿಂತನೆ ಅವನನ್ನು ಅಮರನನ್ನಾಗಿಸುತ್ತದೆ. ಆದರೆ ಆರ್ಫಿಯಸ್ ಈ ಚಿಂತನೆಗಳಿಂದ ದೂರ ಉಳಿದು ಸ್ವಯಂರತಿಯಲ್ಲಿ ಮುಳುಗುತ್ತಾನೆ.

ಪುರುಷನಿಗಾಗಿ ಸಾಯುವ, ಪುರುಷನ ಪ್ರೇಮಕ್ಕೆ ಹಂಬಲಿಸುವ, ಆತನಿಗೆ ಗೌರವ, ಆದರ ನೀಡುವ ಮಹಿಳೆಯರನ್ನು ನಾವು ಸದಾ ಗೌರವಿಸುತ್ತೇವೆ. ಆದರೆ ಮಹಿಳೆಗಾಗಿ ಸಾಯುವ, ಆಕೆಯ ಪ್ರೀತಿಯಲ್ಲಿ ಸರ್ವತ್ಯಾಗ ಮಾಡುವ ಪುರುಷನನ್ನು ಎಂದಿಗೂ ಗೌರವಿಸಲಿಲ್ಲ. ಆದರೂ ಧರ್ಮಗ್ರಂಥಗಳು ಇಂತಹ ಪುರುಷರ ಕಥೆಗಳನ್ನು ನಿರೂಪಿಸುತ್ತದೆ. ಅದರಲ್ಲಿ ಪುರುಷರು ತಮ್ಮ ಹೆಂಡತಿಯರೊಂದಿಗೆ ತುಂಬಾ ಭಾವಾನಾತ್ಮಕ ಸಂಬಂಧ ಹೊಂದಿದ್ದು, ಅವರ ಅನುಪಸ್ಥಿತಿಯಲ್ಲಿ ಅವರು ಹುಚ್ಚರಾಗುತ್ತಾರೆ. ಋಗ್ವೇದದಲ್ಲಿ ಪುರೂರವನು ತನ್ನ ಪತ್ನಿ ಊರ್ವಶಿಯು ಸ್ವರ್ಗಕ್ಕೆ ಮರಳಿದ ನಂತರ ತನ್ನ ವಿವೇಕವನ್ನು ಕಳೆದುಕೊಂಡ ಪುರುಷನ ಕಥೆ ಪ್ರಸ್ತಾಪಿಸಲಾಗಿದೆ. ಇದೇ ರೀತಿಯ ಕಥೆ ಶ್ರೀರಾಮನ ಪೂರ್ವಜ ಅಜಾ ತನ್ನ ಪತ್ನಿ ಇಂದುಮತಿ ಆಕಸ್ಮಿಕವಾಗಿ ಮರಣ ಹೊಂದಿದಾಗ

ರಾಜ್ಯಭಾರ ಮಾಡಲಾಗದೆ ಇಂದುಮತಿಗಾಗಿ ಪರಿತಪಿಸುವುದನ್ನು ಕಾಣಬಹುದು. ರಾಮಾಯಣದಲ್ಲಿ ಬರುವ ಶ್ರೀರಾಮನ ಸೀತಾ ವಿಯೋಗ ಪ್ರಸಂಗವಂತು ಯಾರ ಮನಸ್ಸನ್ನು ಬೇಕಾದರು ಕಲಕುವಂತಿದೆ. ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನನ ಹುಡುಕಾಟಕ್ಕೆ ಹೊರಟ ಪರಿಯನ್ನು ಆಕೆಯ ವಚನಗಳಲ್ಲಿ ಕಂಡುಬರುವ ತೀವ್ರತೆಯನ್ನು ವಾಲ್ಮೀಕಿ ಮಹರ್ಷಿಯ ರಾಮಾಯಣದ ಶ್ರೀರಾಮನಲ್ಲೂ ಗಮನಿಸಬಹುದು. ರಾಮನ ದುಃಖದ ಪ್ರಲಾಪವು ಪರಾಕಾಷ್ಠೆಯನ್ನು ಮುಟ್ಟುತ್ತದೆ. ಸಾಮಾನ್ಯ ಮಾನವನಂತೆ ಹೆಂಡತಿಯ ಪ್ರತಿ ಅಪಾರ ಪ್ರೇಮವನ್ನು ಹೊಂದಿರುವ ವ್ಯಕ್ತಿಯಂತೆ ಚಿತ್ರಿಸಲ್ಪಟ್ಟಿದ್ದಾನೆ. ಆದರ್ಶ ಸಮಾಜವು ಯಾವಾಗಲೂ ತಮ್ಮ ಪುರುಷರಿಗಾಗಿ ಸಾಯುವ ಮಹಿಳೆಯರನ್ನು ಮೌಲ್ಯೀಕರಿಸಿದ್ದೇವೆ. ಆದರೆ ಸಮಾಜವು ಮಹಿಳೆಯರಿಗಾಗಿ ತಮ್ಮ ಪತ್ನಿಗಾಗಿ ಸರ್ವಸ್ವ ತ್ಯಾಗ ಮಾಡಿ, ಸಾಯಲು ಸಿದ್ಧನಾಗುವ ಪುರುಷರನ್ನು ಅಪಹಾಸ್ಯ ಮಾಡುತ್ತದೆ ಮತ್ತು ಅಪಹಾಸ್ಯ ಮಾಡುತ್ತಲ್ಲಿದ್ದೇವೆ. ತಮ್ಮ ಹೆಂಡತಿಯರಿಗಾಗಿ ಶೋಕಿಸುವ ಪುರುಷರನ್ನು ನಾವು ದುರ್ಬಲರೆಂದು ನೋಡುತ್ತೇವೆ. ಗಂಡಾದವನು ಹೆಣ್ಣಿನ ಪ್ರತಿ ಮೋಹ, ಪ್ರೀತಿ, ಇಡಬಾರದೆಂದು, ಆಕೆಗಾಗಿ ಪರಿತಪಿಸುವುದನ್ನು ಹೇಡಿತನವೆಂದು ಸಾರಿ ಹೇಳಲಾಗುತ್ತದೆ. ಹೆಣ್ಣನ್ನು ಮಾಯೆಗೆ ಹೋಲಿಸಿ ಪುರುಷನ ಶ್ರೇಯೋಭಿವೃದ್ಧಿಗೆ ಅಡ್ಡಿಯಾಗುವಳೆಂದು ನಂಬಲಾಗುತ್ತದೆ. ಇದು ಪುರುಷಪ್ರಧಾನ ಏರಿಕೆಯನ್ನು ಬಹಿರಂಗಪಡಿಸುತ್ತದೆ. ಬಹುಶಃ ನಮ್ಮ ಸುತ್ತಲೂ ನಾವು ನೋಡುವ ವಿಷಕಾರಿ ಪುರುಷಪ್ರಧಾನ ವ್ಯವಸ್ಥೆಯೇ ಇದಕ್ಕೆ ಕಾರಣವಾಗಿದೆ. ಧರ್ಮ, ಸಾಹಿತ್ಯದಲ್ಲಿ ಮನುಷ್ಯನಲ್ಲಿ ಉಂಟಾಗುವ ಮಾಯೆ, ಮೋಹಕ್ಕೆ ನಮ್ಮ ಆಸೆಗಳೇ ಕಾರಣವೆಂದು ಹೇಳಿದ್ದರು ಅದನ್ನು ಅರ್ಥಮಾಡಿಕೊಳ್ಳುವ ವ್ಯವಧಾನ ನಮ್ಮ ಸಮಾಜಕ್ಕೆ ಇಲ್ಲದಿರುವುದನ್ನು ಕಾಣಬಹುದು. ಮೇಲೆ ಉಲ್ಲೇಖಿತ ಪುರಾಣಗಳ ಭಾಗಗಳಲ್ಲಿನ ಪುರುಷರು ಹೆಣ್ಣನ್ನು ಪ್ರೇಮಿಸಿದರೆ ಹೊರತು ಕಾಮಿಸಲಿಲ್ಲ, ಕಾಮವು ಕ್ಷಣ ಮಾತ್ರದಲ್ಲಿ ಹೊತ್ತಿ ಉರಿದು ಆರಿಹೋಗುವ ಪ್ರಕ್ರಿಯೆಯಾದರೆ, ಪ್ರೇಮವು ಸೂರ್ಯನಂತೆ ಪ್ರಖರವಾಗಿ ಬೆಳಗುವ ಕ್ರಿಯೆಯಾಗಿದೆ. ಆದ್ದರಿಂದ ಪುರುಷನ ಕುರಿತ ಭಾವನಾಲೋಕವು ಸದಾ ಗ್ರಾಸಕ್ಕೆ ಒಳಗಾದೆ.

**ಸಮಾರೋಪ**

ಈ ಎಲ್ಲಾ ಕಥೆಗಳಲ್ಲಿನ ಸಾವು ಸಂಬಂಧಗಳ ಅಂತ್ಯವೂ ಆಗಿದೆ. ಎಲ್ಲವೂ ಚೆನ್ನಾಗಿಯೇ ಇದ್ದ ಅದ್ಭುತ ಸಮಯಕ್ಕೆ ಮರಳಲು ಪುರುಷ ಹಂಬಲಿಸುತ್ತಾನೆ. ಅವನು ಸಂಬಂಧವನ್ನು ಪುನರುತ್ಥಾನಗೊಳಿಸುವ ಆಶಯದೊಂದಿಗೆ ಮೃತಲೋಕಕ್ಕೆ ಪ್ರಯಾಣಿಸುತ್ತಾನೆ. ಆದರೆ ಯಶಸ್ಸು ಹಿಂತಿರುಗಿ ನೋಡುವುದಿಲ್ಲ. ಪ್ರೇಮ ಮತ್ತು ತ್ಯಾಗ ಎರಡೂ ಇಲ್ಲದೆ ಜೀವನ ಅಥವಾ ಪ್ರೀತಿ ಇರಲು ಸಾಧ್ಯವಿಲ್ಲ.

ಸಮಾಜದಲ್ಲಿ ವ್ಯಕ್ತಿಯು ತನ್ನ ಭಾವನೆಗಳನ್ನ ವ್ಯಕ್ತಪಡಿಸುವುದರಲ್ಲಿರುವ ರಾಜಕಾರಣವನ್ನು ಈ ಲೇಖನದ ಮೂಲಕ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ನಾವು ಗಮನಿಸಿದಂತೆ ಸಮಾಜದ ನೀತಿನಿಯಮಗಳು

ಸ್ತ್ರೀಗೆ ಮಾತ್ರ ಸೀಮಿತವಾಗಿರುವುದೆಂದು ಮತ್ತು ಸಾಮಾಜಿಕ ಒತ್ತಡಗಳನ್ನು ಸ್ತ್ರೀ ಮಾತ್ರ ಅನುಭವಿಸುತ್ತಾಳೆಂದು ಚಿತ್ರಿಸಲಾಗುತ್ತದೆ. ಆದರೆ ಈ ಸಾಮಾಜಿಕ ಒತ್ತಡವನ್ನು ಪುರುಷನು ಸಹ ಅನುಭವಿಸುತ್ತಾನೆ. ಆದರೆ ಅದನ್ನು ಅಭಿವ್ಯಕ್ತಿಸುವುದಿಲ್ಲ. ಸಮಾಜವು ಮನುಷ್ಯನನ್ನು ನಿಯಂತ್ರಿಸುವುದರಿಂದ ಇದು ಲಿಂಗ ತಾರತಮ್ಯ ಮಾಡದೇ ಎಲ್ಲರನ್ನು ಒಂದಲ್ಲ ಒಂದು ರೀತಿಯಲ್ಲಿ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತದೆ.

ಮನೋವಿಜ್ಞಾನಿಗಳು ಕಂಡುಕೊಂಡ ವೈಜ್ಞಾನಿಕ ಸತ್ಯಗಳಲ್ಲೊಂದು ಪುರುಷನು ಸಹಾಯವನ್ನು ಯಾಚಿಸಲು ಹಿಂದೇಟ್ಹಾಗುವುದು ಒಂದು ಆಗಿದೆ. ಉದಾಹರಣೆಗೆ ದಾರಿಹೋಕನು/ಚಾಲಕನು ದಾರಿ ಮರೆತಾಗ ಯಾರೊಂದಿಗೂ ಅಷ್ಟಾಗಿ ರಸ್ತೆಗಳ ಬಗ್ಗೆ ಮಾಹಿತಿ ಪಡೆಯಲು ಅಪೇಕ್ಷಿಸುವುದಿಲ್ಲ, ಅದೇ ಮಹಿಳೆಯರಾಗಿದ್ದರೆ ದಾರಿ ತಪ್ಪಬಾರದೆಂಬ ಪರಿಜ್ಞಾನದಿಂದ ಪ್ರತಿಯೊಂದು ತಿರುವಿಗೂ ಖಾತ್ರಿಪಡಿಸಿಕೊಂಡು ಮುಂದೆ ಸಾಗುತ್ತಾರೆ. ಪುರುಷನು ತಾನು ಹೋಗುತ್ತಿರುವ ದಾರಿ ಸರಿಯೆಂದು ಮುಂದೆ ಸಾಗುತ್ತಾನೆ. ಇದಕ್ಕೆ ನಮ್ಮ ಮಿದುಳಿನ ನರಮಂಡಲದ ವಿನ್ಯಾಸದಲ್ಲಿರುವ ಬದಲಾವಣೆಯೂ ಒಂದಾಗಿರದೆ. ಆದರೆ ಪುರುಷನು ತನ್ನ ಭಾವನೆಗಳ ಅಭಿವ್ಯಕ್ತಿ ವಿಧಾನಕ್ಕೆ ಹಿಂಜರಿಯುವುದು ಸಾಮಾನ್ಯ ಲಕ್ಷಣವಾಗಿ ಮನೋವಿಜ್ಞಾನಿಗಳು ಗುರುತಿಸುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಲಿಂಗ ಸಂಬಂಧಿ ಹಲವಾರು ಸಂಶೋಧನೆಗಳಾಗಿದ್ದು, ಇವೆಲ್ಲಾ ಸ್ತ್ರೀ–ಪುರುಷ ನಡುವಿನ ಭಾವನಾತ್ಮಕ ಅಭಿವ್ಯಕ್ತಿಯ ಭಿನ್ನತೆಗಳನ್ನು ಸೂಚಿಸುತ್ತದೆ. ಪುರುಷರು ಸಹಾಯವನ್ನು ಹುಡುಕುವುದು ಅಥವಾ ಕೇಳುವುದು ಎಂದರೆ ಅದು ಆತನ ವೈಫಲ್ಯಕ್ಕೆ ಸಮನಾಗಿರುತ್ತದೆ ಎಂದು ಭಾವಿಸುತ್ತಾನೆ. ಆದರೆ ಮೇಲೆ ಉಲ್ಲೇಖಿತ ಕಥೆಗಳನ್ನು ಗಮನಿಸಿದಾಗ ಆತ ಇದ್ಯಾವುದೇ ಮಿತಿಗಳಿಗೆ ಒಳಗಾಗದೇ ತನ್ನ ಭಾವನೆಗಳ ಎಲ್ಲೆಯನ್ನು ಮೀರಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಪ್ರಕೃತಿ ಸಹಜ ಗುಣಗಳನ್ನು ಯಾವುದೇ ಒತ್ತಡಗಳಿಗೆ ಒಳಗಾಗದೇ ಅಭಿವ್ಯಕ್ತಿಸಿರುವುದನ್ನು ಗಮನಿಸಬಹುದಾಗಿದೆ.

ಸಮಾಜದಲ್ಲಿ ಪುರುಷನನ್ನು ಭಾವನಾಹೀನನನ್ನಾಗಿ ಚಿತ್ರಿಸಲಾಗಿದೆ. ಆತನು ಭಾವಜೀವಿಯನ್ನಾಗಿ ಅರ್ಥೈಸಿಕೊಳ್ಳಲಾಗುವುದೇ ಇಲ್ಲ. ಹಾಗೆಯೇ ಪುರುಷ ಭಾವನೆಗಳೆಂದಾಕ್ಷಣ ತಿಳಿಹಾಸ್ಯದಲ್ಲಿ, ಉಡಾಫೆ ಮಾತುಗಳ ಮೂಲಕ ನೋಡಲಾಗುತ್ತದೆ. ಕಾರಣ ಪುರುಷ ತನ್ನ ಭಾವನೆಗಳನ್ನು ಹತೋಟಿಯಲ್ಲಿಡಬಲ್ಲ, ಭಾವನೆಗಳಲ್ಲಿ ಅಷ್ಟು ಸರಳವಾಗಿ ಹರಿದು ಹೋಗದವನೆಂತಲೂ, ಭಾವನಾತ್ಮಕವಾಗಿ ದೃಢ ನಿರ್ಧಾರಗಳನ್ನು ಹೊಂದಿರುವುದಾಗಿ ಇರುವ ಸಾಮಾನ್ಯ ಭಾವನೆಗಳು ಆತನನ್ನು ಕೆಲವು ನಿಯಮಗಳಲ್ಲಿ ಬಂಧಿಸಲ್ಪಡಲಾಗಿದೆ.

ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 48 – 60

## ಪರಾಮರ್ಶನ ಗ್ರಂಥಗಳು


1. ಅಬ್ದುಲ್ ಗಫ್ಫಾರ್: ಪವಿತ್ರ ಕುರ್‌ಆನ್, ಸೂರಾ ೨೬ ಆಯತ್ ೧೭೦–೧೭೧, ಶಾಂತಿ ಪ್ರಕಾಶನ, ಮಂಗಳೂರು, ೨೦೦೯, ಪುಟ ಸಂಖ್ಯೆ : ೬೩೨.
2. ಕೆ.ಅನಂತರಾಮರಾವ್, ಮಹಾಭಾರತ, ವಿದ್ಯಾ ಪಬ್ಲಿಷಿಂಗ್ ಹೌಸ್, ೨೦೧೫.
3. ಎಸ್.ಎಲ್.ಶೇಷಗಿರಿರಾವ್, ಗ್ರೀಕ್ ರಂಗಭೂಮಿ ಮತ್ತು ನಾಟಕ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩.
4. ಎಸ್.ಎಲ್.ಶೇಷಗಿರಿರಾವ್, ಪಾಶ್ಚಾತ್ಯ ಸಾಹಿತ್ಯ ವಿಹಾರ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩.
5. ಎಲ್.ಎಸ್.ಶೇಷಗಿರಿರಾವ್, ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಕಾಮಧೇನು ಪ್ರಕಾಶನ, ಬೆಂಗಳೂರು.
6. Encyclopedia Britannica, Ancient religions and Mythology: Izanagi and Izanami, www.britannica.com , https://www.britannica.com/topic/Izanagi
7. Robert Graves, The Greek Myths, Penguin Books Ltd, London, 1955, volume 1 chapter 28, 'Orpheus' p.115.
8. King James Version, The holy Bible-the Complete old and New Testament, Chapter 19, verse 17, 23-26, Christian art Publishers.
9. E.M Forster, Howards End, Dover publication, 1910, chapter 27, Page-237
10. Robertson, John M, the (Un)Emotional Male: Physiological, Verbal, and Written Correlates of Expressiveness. The Journal of Men's Studies, Volume 9, Spring 2001
11. Christine Heifner, The Male Experience of Depression, Perspectives in Psychiatric Care, Vol. 33, No. 2, April-June 1997.